ಕಷ್ಟವಾಗುತ್ತಿತ್ತು. ಆಕೆಗೂ ಆತನ ಮೇಲೆ ಅನನ್ಯವಾದ ಪ್ರೀತಿ ಇತ್ತು. ರೇವತಿಯ ಮಾತು ಕೇಳಿ ಅವನ ಕವಿ ಹೃದಯ ಮತ್ತೆ ಜಾಗೃತವಾಗಿತ್ತು. ಕೆಲ ನಿಮಿಷದ ನಂತರ ಸಂತೋಷದಿಂದ ಮನದಲ್ಲಿಯೇ ಪ್ರೇಮಗೀತೆಯೊಂದನ್ನು ಗುಣಗುಣಿಸುತ್ತ ಹೊರಬಿದ್ದ. ಎರಡು ಮೂರು ದಿನ ಆತ ಆಕೆಯ ಕಡೆಗೆ ಹೋಗಲಿಲ್ಲ. ಹಳೆಯ ನೆನಪುಗಳನ್ನು ಕೆದರುತ್ತ ಹೋದ. ಇದೇ ಗುಂಗಿನಲ್ಲಿ ವೇಳೆ ಕಳೆದು ಹೋದದ್ದು ಗೊತ್ತಾಗಲಿಲ್ಲ. ಮನೆಯಲ್ಲಿ ಆತನ ಮೇಲೆ ವಾತ್ಸಲ್ಯದ ಝರಿ ಹರಿಸುವ ತಾಯಿ ಇದ್ದಳು. ಆಕೆ ಭಯಾನಕವಾದ ಕರ್ಕರೋಗದಿಂದ ಬಳಲುತ್ತಿದ್ದಳು. ಆಕೆಗೆ ಆ ರೋಗ ಇಲ್ಲದಿದ್ದರೆ ಬಹುಶಃ ಆತನ ಮದುವೆ ರೇವತಿಯ ಜೊತೆ ಆಗುತ್ತಿತ್ತೇನೋ. ರೇವತಿಯ ಪೋಷಕರ ಅಸಮ್ಮತಿಗೆ ಮುಖ್ಯ ಕಾರಣ ಇದೇ ಆಗಿತ್ತು. ನಿಜವಾದ ವಿಷಯ ಏನು ಎಂಬುದು ಯಾರಿಗೂ ಗೊತ್ತಿರಲಿಲ್ಲ. ನಿಶಿಕಾಂತನ ಆರ್ಥಿಕ ಪರಿಸ್ಥಿತಿಯೂ ಇನ್ನೊಂದು ಕಾರಣವಿರಬಹುದು. ಗಣಪುಲೆಯಂತಹ ಸರ್ವದೃಷ್ಟಿಯಿಂದ ಯೋಗ್ಯನಾದ ವರನನ್ನು ಕೈ ಬಿಟ್ಟು ನಿಶಿಕಾಂತನನ್ನು ಆಯ್ಕೆ ಮಾಡುವುದು ಮೂರ್ಖತನವೆನಿಸುತ್ತಿತ್ತು. ಈಗ ರೇವತಿ ಗಣಪುಲೆಯ ಸಹಧರ್ಮಿಣಿ ಆಗಿದ್ದಳು. ನಿಶಿಕಾಂತನ ಕೂಡ ಆಕೆಯ ಸಂಬಂಧ ಒಂದು ರೀತಿಯಿಂದ ಕಳಚಿ ಹೋಗಿತ್ತು. ರೇವತಿಯ ಮದುವೆ ನಿಶ್ಚಿತವಾದ ದಿನ, ನಿಶಿಕಾಂತನ ಪಾಲಿಗೆ ಅದು ಕರಾಳ ದಿನವಾಗಿತ್ತು. ಅದರ ನೆನಪು ಅವನನ್ನು ಬಹಳಷ್ಟು ಕಾಡಿದೆ. ಅಂದು ಅವರಿಬ್ಬರಿಗೂ ಬಹಳ ದುಃಖವಾಗಿತ್ತು. ಮನೆಯಿಂದ ಪಲಾಯನ ಮಾಡಿ ದೂರ ಓಡಿ ಹೋಗಿ ಮದುವೆ ಮಾಡಿಕೊಳ್ಳಬೇಕೆಂಬ ಯೋಜನೆಯನ್ನು ಹಮ್ಮಿಕೊಂಡಿದ್ದರು. ಆದರೆ ಅದು ಕನಸಾಗಿಯೇ ಉಳಿಯಿತು. ರೇವತಿಯ ಮದುವೆ ಗಣಪುಲೆಯ ಜೊತೆ ಆಗಿಬಿಟ್ಟಿತ್ತು. ಆದರೂ ಆಕೆ ಆತನಿಗೆ ತಾನು ಆತನನ್ನು ಒಂದು ಕ್ಷಣವೂ ನಿನ್ನನ್ನು ಮರೆಯುವುದಿಲ್ಲ, ಎಂದೆಂದಿಗೂ ನಿನ್ನವಳೇ ಎಂದು ವಚನ ಕೊಟ್ಟಿದ್ದಳು. ದಿನ ರಾತ್ರಿಯೆಲ್ಲ, ಆಕೆಯ ಮನಸ್ಸು ನಿಶಿಕಾಂತನಲ್ಲಿಯೇ ರಮಿಸುತ್ತಿತ್ತು. ಇದಾದ ಮೇಲೆ ನಿಶಿಕಾಂತ ಒಂದು ಹೆಜ್ಜೆ ಮುಂದೆ ಇಟ್ಟಿದ್ದ. ಆಜನ್ಮ ಬ್ರಹ್ಮಚಾರಿ ಆಗುವ ದೃಢ ಸಂಕಲ್ಪ ಮಾಡಿದ್ದ. ಕೋಮಲ ಹೃದಯದ ಈ ಬಡಪಾಯಿ ಕವಿಯ ಜೀವನದಲ್ಲಿ, ಇಲ್ಲಿಯವರೆಗೆ ಕೇವಲ ಓರ್ವ ಸ್ತ್ರೀಯ ಸಂಪರ್ಕ ಬಂದಿತ್ತು. ಆಕೆಯೇ ರೇವತಿ. ಆಕೆಯ ಕುರಿತು ವಿಚಾರ ಮಾಡುತ್ತಲೇ ಉಳಿದ ಆಯುಷ್ಯವನ್ನು ಆತ ಕಳೆಯುವವನಿದ್ದ. ಆಕೆಯನ್ನು ಜ್ಞಾಪಿಸಿಕೊಳ್ಳುತ್ತ ಬದುಕುವವನಿದ್ದ. ರೇವತಿಯ ಮನೆ ಇದೇ ಊರಿನಲ್ಲಿತ್ತು. ಆದರೆ ಈಗ ಆಕೆಯ ಮನೆಗೆ ಮೇಲಿಂದ ಮೇಲೆ ಹೋಗುವದು ಸರಿ ಎನಿಸುವುದಿಲ್ಲ ಎಂಬುದು ಆತನಿಗೆ ಚೆನ್ನಾಗಿ ಗೊತ್ತು. ಆದರೂ ಆಕೆಯನ್ನು ಭೇಟಿ ಮಾಡಲು, ಆಕೆಯ ಕೂಡ ಮಾತನಾಡಲು ಅವನ ಮನ ಹಾತೊರೆಯುತ್ತಿತ್ತು. ಆತನ ತಾಯಿ ರೋಗಪೀಡಿತಳಾಗಿದ್ದಳು. ಆತನ ನೌಕರಿ ಹೇಳಿಕೊಳ್ಳುವಂತಹದಲ್ಲ. ಸಮಾಜದ ದೃಷ್ಟಿಯಲ್ಲಿ ಈತ ಮದುವೆ ಆದರೂ ಅಷ್ಟೇ, ಆಗದಿದ್ದರೂ ಅಷ್ಟೇ. ಆತನಿಗೆ ಮದುವೆಗಾಗಿ ಆಗ್ರಹ ಮಾಡುವ, ಅವನ ಮನದಾಳದಲ್ಲಿ ಹೊಕ್ಕು ಆತನಲ್ಲಿದ್ದ ತವಕ ತಲ್ಲಣಗಳನ್ನು ಶೋಧಿಸಿ, ಮಾರ್ಗ ತೋರಿಸುವ ಸಹೃದಯರು ಯಾರೂ ಇರಲಿಲ್ಲ. ಹೀಗಾಗಿ ಆತ ಒಬ್ಬಂಟಿ ಆಗಿದ್ದ. ತಾನೇ ರಚಿಸಿಕೊಂಡ ಕೋಶದಲ್ಲಿ ಏಕಾಂಗಿಯಾಗಿ ಇರುತ್ತಿದ್ದ. ರೇವತಿಯ ವ್ಯಕ್ತಿತ್ವದ ಎಳೆಗಳು ಅವನನ್ನು ಅದರಲ್ಲಿ ಬಂಧಿಸಿ ಸೆರೆ ಹಿಡಿದಿದ್ದವು. ಈ ಜೈಲುವಾಸ ಅವನಿಗೆ ಇಷ್ಟವಾಗಿತ್ತು. ರೇವತಿ ಮೂರು ನಾಲ್ಕು ದಿನ ತವರು ಮನೆಯಲ್ಲಿದ್ದಳು. ದಿನವೂ ಆಕೆಯ ಮನೆಗೆ ಹೋಗುತ್ತಿದ್ದ. ಇಬ್ಬರೂ ಒಮ್ಮೆ ಹೋಟೆಲಿಗೆ ಹೋಗಿದ್ದರು. ಸ್ಪೆಷಲ್ ರೂಮಿನಲ್ಲಿ ಎದುರು ಬದುರು ಕುಳಿತು ಮಾತುಕತೆಗೆ ತೊಡಗಿದರು. ರೇವತಿ ಅವನನ್ನು ನೋಡುತ್ತ. “ನಮ್ಮಿಬ್ಬರ ಪ್ರೀತಿ ವಿಚಿತ್ರವೂ ಚಮತ್ಕಾರಿಕವೂ